

# ಫೆಂಟಾಸ್ಟಿಕ್ ಪಿಟ್

ವಾಯುವ್ಯ ಜಾರ್ಜಿಯಾದ ವಾಕರ್ ಕೌಂಟಿಯಲ್ಲಿರುವ ಎಲಿಸನ್ ಗುಹೆಯು ವಿಶ್ವದ ವಿಸ್ಮಯಕಾರಿ ಗುಹೆಗಳಲ್ಲಿ ಒಂದಾಗಿದೆ. ಇದು ಅಮೆರಿಕದ ಹನ್ನೆರಡನೇ ಆಳವಾದ ಗುಹೆಯಾಗಿದ್ದು 1063 ಅಡಿಗಳಷ್ಟು ಆಳ ಮತ್ತು ಸುಮಾರು 12 ಮೈಲುಗಳಷ್ಟು ಉದ್ದವನ್ನು ಹೊಂದಿದೆ. ಈ ಗುಹಾ ವ್ಯವಸ್ಥೆಯಲ್ಲಿರುವ ತಡೆಯಿಲ್ಲದ ಭೂಗತ ಹೊಂಡಗಳಂತೂ (ಪಿಟ್) ನಿಜಕ್ಕೂ ಅತ್ಯಂತ ವಿಶೇಷವಾಗಿವೆ.

ಗುಹೆಯ ಎದುರಿಗಿರುವ ‘ಇನ್ಕ್ರೆಡಿಬಲ್‌ಪಿಟ್’ (440 ಅಡಿಗಳಷ್ಟು ಆಳ) ‘ಸ್ಮೋಕಿ 1’(500 ಅಡಿಗಳಷ್ಟು ಆಳ) ‘ಸ್ಮೋಕಿ 2’ (ಆಳ 262 ಅಡಿಗಳು) ವಾರ್ಮ ಅಪ್ ಪಿಟ್ (125 ಅಡಿಗಳಷ್ಟು ಆಳ) ಅತ್ಯಂತ ಆಳವಾದ ‘ಫೆಂಟಾಸ್ಟಿಕ್ ಪಿಟ್’ ಮುಂತಾದವುಗಳ ಜೊತೆಗೆ ಕರಗುವ ಸುಣ್ಣದ ಕಲ್ಲಿನಿಂದ ರೂಪುಗೊಂಡಿರುವ ಕಡಿಮೆ ಆಳವಿರುವ ಗವಿಗಳೆಲ್ಲವೂ ಗುಹಾ ರಚನೆಯನ್ನು ಪೂರ್ಣಗೊಳಿಸುತ್ತವೆ.

ಇವುಗಳಲ್ಲೆಲ್ಲಾ ‘ಫೆಂಟಾಸ್ಟಿಕ್ ಪಿಟ್’ ಅತ್ಯದ್ಭುತವಾಗಿದ್ದು ಸುಮಾರು 586 ಅಡಿಗಳಷ್ಟು ಅಂದರೆ ಸ್ಟ್ಯಾಚು ಆಫ್ ಲಿಬರ್ಟಿಗಿಂತ ಎರಡು ಪಟ್ಟು ಎತ್ತರದಷ್ಟು ಕೆಳಕ್ಕೆ ಲಂಬವಾಗಿದೆ. ಕತ್ತಲಿರುವ ಫೆಂಟಾಸ್ಟಿಕ್ ಪಿಟ್‌ಗೆ ಪ್ರವೇಶಿಸುವುದು ಸುಲಭವೇನಲ್ಲ. ಇಲ್ಲಿಗೆ ಹೋಗಬೇಕೆನ್ನುವವರು ಮೊದಲು ವಾರ್ಮಅಪ್ ಪಿಟ್‌ಗೆ ಇಳಿಯಬೇಕು. ಇದು ಕೂಡಾ ಭಾರೀ ಸವಾಲಿನ ಕೆಲಸ. ಫೆಂಟಾಸ್ಟಿಕ್ ಪಿಟ್‌ನ ಮೇಲ್ಭಾಗದಲ್ಲಿ ಅಟ್ಟಿಕ್ ಎಂಬ ಇಕ್ಕಟ್ಟಾದ ಸ್ಥಳವಿದೆ. ಇಲ್ಲಿಂದ ಕೆಳಗಿರುವ ದೈತ್ಯಾಕಾರದ ಆಳದ ಗುಂಡಿಯಲ್ಲಿ ಇಳಿಯಬೇಕಾಗುತ್ತದೆ. ಅತ್ಯಂತ ಅನುಭವಿ ಗುಹಾ ಶೋಧಕರನ್ನು ಮಾತ್ರ ಕಗ್ಗತ್ತಲಿನ ಗುಹೆಯೊಳಗೆ ಹೋಗಲು ಪ್ರೋತ್ಸಾಹಿಸಲಾಗುತ್ತದೆ.

■ ಪ್ರಿಯಾಂಕ ವಿ.ಎಚ್.

